**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು ಇವರ ಕಚೇರಿ ಆದೇಶದ ಉದ್ಧರಣ**

**ಕಚೇರಿ ಆದೇಶ ಸಂಖ್ಯೆ: 40 /2022-23** **ದಿನಾಂಕ: 21 -05-2022**

ವಿಷಯ: ವಲಯ ಅರಣ್ಯ ಅಧಿಕಾಯಯವರ ಸ್ಥಳ ನಿಯುಕ್ತಿ ಕುರಿತು.

ಉಲ್ಲೇಖ:
1. ಸರ್ಕಾರದ ಪತ್ರ ಸಂಖ್ಯೆ: ಅಪಜೀ 143 ಅಅಸೇ 2021, ದಿನಾಂಕ: 27-07-2021 ಹಾಗೂ 31-07-2021.
2. ಮಾನ್ಯ ಉಚ್ಛ ನಾಯಾಲಯದ ರಿಟ್ ಪಿಟಿಷನ್ ಸಂಖ್ಯೆ: 4616/2022ರ ಆದೇಶ ದಿನಾಂಕ: 08-03-2022.
3. ಈ ಕಛೇರಿ ಆದೇಶ ಸಂಖ್ಯೆ: 10/2022-23, ದಿನಾಂಕ: 22-04-2022.
4. ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳ ಅರ್ಜಿ ಸಂಖ್ಯೆ: 1736/2022ರ ಮಧ್ಯಂತರ ಆದೇಶ ದಿನಾಂಕ: 04-05-2022.

*****

ಪ್ರಸ್ತಾವನೆ:

ಉಲ್ಲೇಖ (1)ರ ಸರ್ಕಾರದ ಪತ್ರದಲ್ಲಿ ಅನುಮೋದಿಸಿರುವಂತೆ ಹಾಗೂ ಉಲ್ಲೇಖ (2)ರ ಮಾನ್ಯ ಉಚ್ಛ ನ್ಯಾಯಾಲಯದ ಆದೇಶದನ್ವಯ ಶ್ರೀಮತಿ ಶಾಲಿನಿ ಪಿ. ಎನ್. ವಲಯ ಅರಣ್ಯಾಧಿಕಾರಿ ಇವರನ್ನು ಆನೇಕಲ್ ವಲಯ, ಬೆಂಗಳೂರು ನಗರ ವಿಭಾಗ ಶ್ರೀ ಕೃಷ್ಣ ಎಸ್. ಆರ್.ರವರ ಸ್ಥಳಕ್ಕೆ ಉಲ್ಲೇಖ (3)ರಲ್ಲಿ ವರ್ಗಾಯಿಸಿ ಆದೇಶಿಸಲಾಗಿದೆ.

ಅದರಂತೆ, ಶ್ರೀ ಕೃಷ್ಣ ಎಸ್. ಆರ್., ವಲಯ ಅರಣ್ಯಾಧಿಕಾರಿ ಇವರು ಸ್ಥಳ ನಿರೀಕ್ಷಣೆಗೆ ಒಳಪಟ್ಟಿರುವುದರಿಂದ, ಉಲ್ಲೇಖ (3)ರ ಆದೇಶವನ್ನು ಪ್ರಶ್ನಿಸಿ ಮಾನ್ಯ ಕೆ.ಎ.ಟಿ. ಅರ್ಜಿ ಸಂಖ್ಯೆ: 1736/2022ರಲ್ಲಿ ಪ್ರಕರಣ ದಾಖಲಿಸಿರುತ್ತಾರೆ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಉಲ್ಲೇಖ (4)ರಲ್ಲಿ ಮಾನ್ಯ ನ್ಯಾಯಾಲಯವು ಶ್ರೀ ಕೃಷ್ಣ ಎಸ್. ಆರ್., ವಲಯ ಅರಣ್ಯಾಧಿಕಾರಿ ಇವರಿಗೆ ಕೂಡಲೇ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಲು ನಿರ್ದೇಶನ ನೀಡಲಾಗಿರುತ್ತದೆ. ಆದುದರಿಂದ, ಈ ಕೆಳಕಂಡಂತೆ ಆದೇಶ.

<u>ಆದೇಶ</u>

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಉಲ್ಲೇಖ (4)ರ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಆದೇಶವನ್ನು ಅನುಷ್ಠಾನಗೊಳಿಸಲು ಈ ಕೆಳಕಂಡ ಅಧಿಕಾರಿಯನ್ನು ಅವರ ಹೆಸರಿನ ಮುಂದೆ ನಮೂದಿಸಿರುವ ಹುದ್ದೆಗೆ ಈ ತಕ್ಷಣದಿಂದ ಜಾರಿಗೆ ಬರುವಂತೆ ಸ್ಥಳನಿಯುಕ್ತಿಗೊಳಿಸಿ ಆದೇಶಿಸಿದೆ.

| ಕ್ರ. ಸಂ | ವಲಯ ಅರಣ್ಯಾಧಿಕಾರಿಗಳ ಹೆಸರು | ಸ್ಥಳ ನಿಯುಕ್ತಿಗೊಳಿಸಲಾದ ಹುದ್ದೆ ಮತ್ತು ಸ್ಥಳ |
|---|---|---|
| 1. | ಶ್ರೀ ಕೃಷ್ಣ ಎಸ್. ಆರ್.,<br>(ಸ್ಥಳ ನಿರೀಕ್ಷಣೆಯಲ್ಲಿರುವವರು) | ವಲಯ ಅರಣ್ಯಾಧಿಕಾರಿ, (ಲೀಗಲ್ ಹಾಗೂ ಐ.ಸಿ.ಟಿ) ಬೆಂಗಳೂರು ಗ್ರಾಮಾಂತರ ವಿಭಾಗ– ಖಾಲಿ ಹುದ್ದೆ. |

21/5/22

(ರಾಜ್ ಕಿಶೋರ ಸಿಂಗ್ ಭಾ.ಅ.ಸೇ)
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

**ಸಂಖ್ಯೆ:** ಕೆಎಫ್‌ಡಿ/ಹೆಚ್‌ಒಎಫ್‌ಎಫ್/ಬಿ1(ಇಎಸ್‌ಟಿ)/83/2022

<u>ಪ್ರತಿಯನ್ನು:</u>
1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಪರಿಸ್ಥಿತಿ ಶಾಸ್ತ್ರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಸರ್ಕಾರಿ ವಕೀಲರು, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಕಂದಾಯ ಭವನ, 4ನೇ ಮಹಡಿ, ಕೆ.ಜಿ.ರಸ್ತೆ, ಬೆಂಗಳೂರು – 560009 ಇವರಿಗೆ (ಕೆ.ಎ.ಟಿಯ ಅರ್ಜಿ ಸಂಖ್ಯೆ: 1736/2022ಕ್ಕೆ ಸಂಬಂಧಿಸಿದಂತೆ) ಮಾಹಿತಿಗಾಗಿ ಸಲ್ಲಿಸಿದೆ.
3. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ವೃತ್ತ, ಬೆಂಗಳೂರು.
4. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಐಸಿಟಿ ಘಟಕ, ಬೆಂಗಳೂರು ಇವರಿಗೆ ಸದರಿ ಆದೇಶವನ್ನು ತಂತ್ರಾಂಶದಲ್ಲಿ ಕೂಡಲೇ ಅಳವಡಿಸಲು ಸೂಚಿಸಿದೆ.
5. ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ಬೆಂಗಳೂರು.
6. ಸಂಬಂಧಿಸಿದ ವಲಯ ಅರಣ್ಯ ಅಧಿಕಾರಿಗಳಿಗೆ ನಿಯಂತ್ರಣಾಧಿಕಾರಿಗಳು / ಘಟಕಾಧಿಕಾರಿಗಳ ಮೂಲಕ.
7. ಈ ಕಛೇರಿ ಆದೇಶ ಕಡತಕ್ಕೆ / ಬಿಡಿ ಪ್ರತಿ.